12

ಇಲಾಖೆ / ವಿಷಯ : DEPARTMENT / SUBJECT: ಗೃಹ - ಸಿ.ಡಿ. ಪ್ರಕರಣ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ವಾಣಿ                ದಿನಾಂಕ : DATE : 4/4/2021

# ಸಿಡಿ ರಹಸ್ಯ ಕೆದಕಿದ ಎಸ್ಐಟಿ

## 5ನೇ ದಿನವೂ ನಾಲ್ಕೂವರೆ ಗಂಟೆ ಯುವತಿ ವಿಚಾರಣೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು 4-4-21

ಅಶ್ಲೀಲ ಸಿಡಿ ಪ್ರಕರಣದ ಸಂಬಂಧ 5ನೇ ದಿನವೂ ಯುವತಿಯನ್ನು ಸತತ ನಾಲ್ಕೂವರೆ ಗಂಟೆ ಎಸ್ಐಟಿ ಅಧಿಕಾರಿಗಳು ವಿಚಾರಣೆ ನಡೆಸಿದರು. ಶನಿವಾರದ ವಿಚಾರಣೆಯಲ್ಲಿ ಅಶ್ಲೀಲ ಸಿಡಿ 'ಸೃಷ್ಟಿ'ಯ ರಹಸ್ಯ ಕೆದಕುವ ಪ್ರಯತ್ನ ಮಾಡಿದ್ದಾರೆ. ವಿಡಿಯೋ ಯಾರು? ಹೇಗೆ? ಎಲ್ಲಿ? ಮಾಡಿದರು? ಸಿಡಿ ಬಿಡುಗಡೆ ಮಾಡಿದ್ಯಾರು? ಎಂಬ ಪ್ರಶ್ನೆಗಳಿಗೆ ಉತ್ತರ ಪಡೆದಿದ್ದಾರೆ. ಬೆಳಗ್ಗೆ 10.30ಕ್ಕೆ ವಿಚಾರಣೆಗೆ ಹಾಜರಾದ ಯುವತಿಯನ್ನು ಸಂಜೆ 3.30ರವರೆಗೆ ವಿಚಾರಣೆ ನಡೆಸಿ, ಮತ್ತೆ ಪೊಲೀಸ್ ಭದ್ರತೆಯೊಂದಿಗೆ ಯುವತಿ ವಾಸಿಸುವ ಮನೆಗೆ ಕರೆದುಕೊಂಡು ಹೋಗಿ ಬಿಡಲಾಗಿದೆ. ವಿಡಿಯೋ ಚಿತ್ರೀಕರಣ ಹಾಗೂ ಅದಕ್ಕೆ ಬಳಕೆಯಾದ ಕ್ಯಾಮಾರಾ ಯಾವುದು? ರೆಕಾರ್ಡಿಂಗ್ ಮಾಡಿರುವುದು ಮೊಬೈಲ್ ಕ್ಯಾಮರಾದಿಂದಲೋ ಅಥವಾ ಬೇರೆ ಕ್ಯಾಮರಾದಿಂದಲೋ? ಇದರಲ್ಲಿ 3-4 ಆಯಾಮಗಳಲ್ಲಿ ವಿಡಿಯೋ ರೆಕಾರ್ಡಿಂಗ್ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ರೆಕಾರ್ಡಿಂಗ್ ಒಬ್ಬರೇ ಮಾಡಿದ್ದೀರಾ ಅಥವಾ ಇನ್ನೂ ಅನೇಕ ಮಂದಿ ಇದರ ಹಿಂದೆ ಇದ್ದಾರೆಯೇ? ಎಂಬಿತ್ಯಾದಿ ಪ್ರಶ್ನೆಗಳನ್ನು ಯುವತಿ ಮುಂದೆ ಇಡಲಾಗಿತ್ತು. ಮಾಜಿ ಸಚಿವರ ಕಿರುಕುಳ ತಾಳಲಾರದೇ ವಿಡಿಯೋ ರೆಕಾರ್ಡಿಂಗ್ ಮಾಡಿರುವುದು ನಾನೇ ಎಂದು ಯುವತಿ ತನಿಖಾಧಿಕಾರಿಗಳ ಮುಂದೆ ಹೇಳಿಕೊಂಡಿದ್ದಾಳೆ ಎನ್ನಲಾಗಿದೆ. ಎಲ್ಲಕ್ಕೂ ಮಿಗಿಲಾಗಿ ಹಣಕಾಸಿನ ವಿಚಾರದ ಬಗ್ಗೆ ಕೆದಕಿರುವ ಎಸ್ಐಟಿ ಅಧಿಕಾರಿಗಳು, ಇಷ್ಟು ದಿನಗಳ ಕಾಲ ಹಣಕಾಸಿನ ನೆರವನ್ನು ಯಾರು ನೋಡಿಕೊಂಡರು? ನ್ಯಾಯಾಲಯದಲ್ಲಿ 164ರ ಹೇಳಿಕೆ ದಾಖಲು ಮಾಡಿದ ದಿನ ಕರೆತಂದವರು ಯಾರು? ಎಂದು ಪ್ರಶ್ನಿಸಿದ್ದಾರೆ. ಇದಕ್ಕೆ ಯುವತಿ ಗೊಂದಲದ ಹೇಳಿಕೆ ನೀಡಿದ್ದಾಳೆ ಎಂದು ತಿಳಿದು ಬಂದಿದೆ.

**[illegible]**

**ಸಿಡಿ ಪ್ರಕರಣ ಸಂಬಂಧ ಸೋಮವಾರ ವಿಚಾರಣೆಗೆ ಹಾಜರಾಗುವಂತೆ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಹಾಗೂ ಸಿಡಿಯಲ್ಲಿರುವ ಯುವತಿಗೆ ಎಸ್ಐಟಿ ಅಧಿಕಾರಿಗಳು ನೋಟಿಸ್ ನೀಡಿದ್ದಾರೆ. ಸೋಮವಾರ ಬೆಳಗ್ಗೆ 10 ಗಂಟೆಗೆ ಯುವತಿಗೆ ಹಾಗೂ ರಮೇಶ್ ಜಾರಕಿಹೊಳಿ ಅವರಿಗೆ ಬೆಳಗ್ಗೆ 11 ಗಂಟೆಗೆ ಹಾಜರಾಗಲು ಸೂಚನೆ ನೀಡಲಾಗಿದೆ.**

### ವಕೀಲ ಮಂಜುನಾಥ್ ಸನ್ನದು ಅಮಾನತು

**ಬೆಂಗಳೂರು:** ಸಿಡಿ ಪ್ರಕರಣದಲ್ಲಿ ಯವತಿ ಪರ ವಕಾಲತ್ತು ವಹಿಸಿರುವ ವಕೀಲ ಆರ್. ಮಂಜುನಾಥ್, ರಾಜ್ಯ ವಕೀಲರ ಪರಿಷತ್ (ಕೆಎಸ್‌ಬಿಸಿ) ವಿರುದ್ಧ ಭ್ರಷ್ಟಾಚಾರ ಆರೋಪಗಳನ್ನು ಮಾಡಿದ ಹಿನ್ನೆಲೆಯಲ್ಲಿ ಅವರ ಸನ್ನದು ಅಮಾನತಿನಲ್ಲಿಡಲಾಗಿದೆ. ಪರಿಷತ್ ವಿರುದ್ಧ ನೀಡಿರುವ ಹೇಳಿಕೆಗಳ ಕುರಿತು 10 ದಿನಗಳ ಒಳಗೆ ವಿವರಣೆ ನೀಡುವಂತೆ ಮಂಜುನಾಥ್‌ಗೆ ಶೋಕಾಸ್ ನೋಟಿಸ್ ಸಹ ಜಾರಿಗೊಳಿಸಲಾಗಿದೆ.

ವಕೀಲರ ಪರಿಷತ್‌ನಲ್ಲಿ ಯಾವುದೇ ಭ್ರಷ್ಟಾಚಾರವಿಲ್ಲ. ಪರಿಷತ್‌ನ ಆದಾಯ, ಖರ್ಚು ವೆಚ್ಚಗಳಿಗೆ ಸಂಬಂಧಿಸಿದಂತೆ ಪ್ರತಿವರ್ಷದ ಲೆಕ್ಕಪರಿಶೋಧನಾ ವರದಿ ನಮ್ಮಲ್ಲಿದೆ. ಅವರಿಗೆ ಆ ಮಾಹಿತಿ ಅಗತ್ಯವಿದ್ದರೆ ಬಂದು ಕೇಳಿ ತಿಳಿದುಕೊಳ್ಳಬೇಕಿತ್ತು. ಅದ್ಯಾವುದನ್ನೂ ಮಾಡದೇ ಸಾಮಾಜಿಕ ಜಾಲತಾಣಗಳಲ್ಲಿ ಮನಬಂದಂತೆ ಹೇಳಿಕೆಗಳನ್ನು ನೀಡಿ, ಸಂಸ್ಥೆಯ ಗೌರವಕ್ಕೆ ಧಕ್ಕೆ ತಂದಿದ್ದಾರೆ. ಆದ್ದರಿಂದ, ಅವರನ್ನು ಅಮಾನತು ಮಾಡಲಾಗಿದೆ ಎಂದು ಕೆಎಸ್‌ಬಿಸಿ ಅಧ್ಯಕ್ಷ ಶ್ರೀನಿವಾಸ ಬಾಬು ಹೇಳಿದ್ದಾರೆ.

### ವಿಚಾರಣೆ ವೇಳೆ ಕೇಳಿದ ಪ್ರಶ್ನೆ

ಎಸ್ಐಟಿ: ಇಷ್ಟು ದಿನಗಳ ಕಾಲ ಹಣಕಾಸಿನ ನೆರವು ನೀಡಿದವರ್ಯಾರು?

ಯುವತಿ: ನಾನೇ ನನ್ನ ದುಡ್ಡನ್ನೇ ತೆಗೆದುಕೊಂಡು ಹೋಗಿದ್ದೆ.

ಎಸ್ಐಟಿ: ವಿಡಿಯೋ ಮಾತ್ರ ರೆಕಾರ್ಡ್ ಮಾಡಿದ್ದೀರಿ? ಯಾರ ಸಹಾಯ ಪಡೆದಿದ್ದೀರಿ?

ಯು: ನನ್ನ ಸ್ನೇಹಿತರ ಸಹಾಯ ಪಡೆದಿದ್ದೆ. ಅವರು ಯಾರೆಂದು ಬೇಡ. ಅವರಿಗೆ ತೊಂದರೆ ಆಗುವುದು ಬೇಡ.

ಎಸ್ಐಟಿ: ನಿಮ್ಮನ್ನು ಅಪಹರಣ ಮಾಡಲಾಗಿತ್ತಾ?

ಯುವತಿ: ಇಲ್ಲ ನನ್ನನ್ನು ಯಾರು ಕಿಡ್ನಾಪ್ ಮಾಡಿಲ್ಲ. ನಾನಾಗಿಯೇ ಹೋಗಿದ್ದೆ.

ಎಸ್ಐಟಿ: ಮಗಳನ್ನು ಅಪಹರಿಸಿದ್ದಾರೆ ಎಂದು ನಿಮ್ಮ ಕುಟುಂಬಸ್ಥರ ಆರೋಪ?

ಯು: ಸಿಡಿ ಬಿಡುಗಡೆ ನಂತರ ಒಂದೆರಡು ದಿನ ಕರೆ ಮಾಡಿ ಮಾತಾಡಿದ್ದೆ. ನಂತರ ನಾನು ಕರೆ ಮಾಡಲಿಲ್ಲ. ಸ್ವಲ್ಪ ದಿನದ ಬಳಿಕ ಅವರ ಮೇಲೆ ಯಾರೊ ಒತ್ತಡ ಹಾಕಿ ದೂರು ಕೊಡಿಸಿದ್ದಾರೆ.

ಎಸ್ಐಟಿ: ಕುಟುಂಬಸ್ಥರಿಗೂ ಸಂಪರ್ಕಿಸದೇ ಹೋಗಿದ್ದು ಯಾಕೆ?

ಯು: ನನ್ನ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಲಾರಂಭಿಸಿತು. ನನಗೆ ಭಯ ಆಯ್ತು. ಸಿಡಿ ಬಿಡುಗಡೆಯಿಂದ ಮನಸ್ಸಿಗೆ ತುಂಬಾನೇ ನೋವಾಯಿತು. ಹೀಗಾಗಿ ಯಾರ ಕಣ್ಣಿಗೂ ಬಿದ್ದಿಲ್ಲ. ಇಲ್ಲಿ ಇರೋದು ಬೇಡ ಎಂದು ನಿರ್ಧರಿಸಿ ನನ್ನ ಸ್ನೇಹಿತ ಆಕಾಶ್ ಜತೆ ಗೋವಾಗೆ ಹೋಗಿದ್ದೆ. ಅಲ್ಲಿಂದ ಬೇರೆ ರಾಜ್ಯಗಳಿಗೂ ತೆರಳಿದ್ದೆ.

ಎಸ್ಐಟಿ: ಗೋವಾದಿಂದ ನಿಮ್ಮ ಊರಿಗೆ ಬರಬಹುದಿತ್ತಲ್ವಾ?

ಯು: ವಿಡಿಯೋ ವೈರಲ್ ಆದ ಬಳಿಕ ನಾನು ಊರಿಗೆ ಹೋಗುವ ಸ್ಥಿತಿಯಲ್ಲಿ ಇರಲಿಲ್ಲ.

ಎಸ್ಐಟಿ: ಯಾರಾದರೂ ನಿಮ್ಮನ್ನು ಬಂಧನದಲ್ಲಿ ಇರಿಸಿದ್ದರಾ?

ಯು: ನನ್ನನ್ನು ಯಾರೂ ಬಂಧಿಸಿ ಇಡಲಿಲ್ಲ. ನಾನೇ ಕೆಲವರ ಸಹಾಯ ಕೇಳಿದ್ದೆ.

ಎಸ್ಐಟಿ: ಕಣ್ಮರೆಯಾದ ಬಳಿಕ 2 ವಿಡಿಯೋ ರಿಲೀಸ್ ಮಾಡಿದ್ರಲ್ಲ. ಅದನ್ನು ಯಾರಾದ್ರೂ ಒತ್ತಡ ಹಾಕಿ ಮಾಡಿಸಿದ್ದಿರಾ?

ಯು: ಅದೆಲ್ಲ ನಾನೇ ಮಾಡಿದ ವಿಡಿಯೋ, ನನಗೆ ಯಾರ ಒತ್ತಡವೂ ಇರಲಿಲ್ಲ.

ಎಸ್ಐಟಿ: ಅಜ್ಞಾತ ಸ್ಥಳದಿಂದ ವಿಡಿಯೋ ಮಾಡಿದ್ದು ಯಾಕೆ?

ಯು: ರಮೇಶ್ ಜಾರಕಿಹೊಳಿ ದೂರು ದಾಖಲು ಮಾಡಿದ್ರಲ್ವಾ, ಅದರಲ್ಲಿ ನನ್ನನ್ನೂ ಸಹ ಅಪರಾಧಿ ಎಂಬಂತೆ ತೋರಿಸುವ ಪ್ರಯತ್ನ ಮಾಡಲಾಯಿತು. ಹೀಗಾಗಿ ವಿಡಿಯೊ ಮೂಲಕ ಸ್ಪಷ್ಟನೆ ಕೊಡಬೇಕಾಯಿತು.

ಎಸ್ಐಟಿ: ನೀವು ಬೆಂಗಳೂರಿನಿಂದ ತೆರಳಿದಾಗ ಯಾರು ನಿಮ್ಮ ಜೊತೆಯಲ್ಲಿದ್ದರು?

ಯು: ನನ್ನ ಸ್ನೇಹಿತ ಆಕಾಶ್ ಬಿಟ್ಟರೆ ನನ್ನ ಜತೆ ಯಾರೂ ಇರಲಿಲ್ಲ.